# ಹರಿಕ್ಷೇತ್ರದಿಂದ ಹರಕ್ಷೇತ್ರಕ್ಕೆ

ಸ್ವಾಮಿ ಕರುಣಾಕರಾನಂದ

*(ಹಿಂದಿನ ಸಂಚಿಕೆಯಿಂದ)*

*(ಲೇಖಕ ಸ್ವಾಮೀಜಿಯವರು ಮಣಿಮಹೇಶಕ್ಕೆ ನಡೆದು ಕೊಂಡು ಹೋಗುತ್ತಿದ್ದಾರೆ. ಅವರ ಜೊತೆಗೆ ಒಬ್ಬ ಮಾರ್ಗದರ್ಶಿ ಕೂಡ ಇದ್ದನು. ಅವರು ಧಾಂಚೋ ಎಂಬ ಸ್ಥಳಕ್ಕೆ ಬಂದಿದ್ದಾರೆ. ಅದೇ ಅವರ ಆ ದಿನದ ವಿಶ್ರಾಂತಿಸ್ಥಾನ.)*

ಧಾಂಚೋದಲ್ಲಿ ನಮಗೆ ಟ್ರೆಕ್ಕಿಂಗ್ ಕಂಪೆನಿಯವರ ಒಂದು ಬಂಕರ್ ಸಜ್ಜಾಗಿತ್ತು! ಮಧ್ಯಾಹ್ನ ೩.೩೦ ಗಂಟೆಗೇ ಅಲ್ಲಿ ಬಂದು ತಲುಪಿದ್ದೆವು. "ಸ್ವಾಮೀಜಿ ನೀವು ವೇಗವಾಗಿಯೇ ನಡೆದಿದ್ದೀರಿ" ಎಂದು ನಮ್ಮ ಮಾರ್ಗದರ್ಶಿ ನನಗೆ ಉತ್ತೇಜನವನ್ನು ನೀಡಿದ. ಅಲ್ಲಿ ಮೂವರು ನಮಗೆ ಅಡುಗೆಯನ್ನು ಸಿದ್ಧಪಡಿಸಿದ್ದರು. ಊಟ ಮಾಡಿ ಒಂದು ಗಂಟೆ ಮಲಗಿ ನಿದ್ರಿಸಿದ ಮೇಲೆ, ಸುಮಾರು ಐದು ಗಂಟೆಗೆ ಅಲ್ಲೇ ಅಡ್ಡಾಡಿ ಬಂದೆವು. ಆಗ ನನಗೆ ದೂರದಲ್ಲಿ, ಹಿಮದಿಂದ ಕೂಡಿದ ಬೆಟ್ಟದಲ್ಲಿ 'ಓಂಕಾರ' ಆಕಾರದ ಹಿಮ ಕಂಡುಬಂತು. ಅದನ್ನು ಕ್ಯಾಮರಾದಲ್ಲಿ ಸೆರೆ ಹಿಡಿದೆ. ಭಸ್ಮಾಸುರನಿಗೆ ಶಿವ ವರವನ್ನು ಕೊಟ್ಟ. ಆಗ ಆತ ಶಿವನ



ಥಾಂಚೋದಿಂದ ಕಂಡುಬಂದ ಒಂದು ದೃಶ್ಯ

ಮೇಲೆಯೇ ಅದನ್ನು ಪರೀಕ್ಷಿಸಲು ಬಂದ. ಆಗ ಶಿವ ಅಲ್ಲಿರುವ ಜಲಪಾತದ ಒಳಗಿರುವ ಗುಹೆಯಲ್ಲಿ ಹೋಗಿ ಸೇರಿಕೊಂಡನಂತೆ. ಶಿವನನ್ನು ಕಾಣದೆ ಭಸ್ಮಾಸುರನು ಹುಡುಕುತ್ತಿರಲು ಮೋಹಿನಿ ವೇಷವನ್ನು ಧರಿಸಿ ಬಂದ ವಿಷ್ಣುವು, ಭಸ್ಮಾಸುರನನ್ನು ಭಸ್ಮವನ್ನಾಗಿ ಮಾಡಿದನಂತೆ. ಆದ್ದರಿಂದ ಆ ಸ್ಥಳಕ್ಕೆ 'ಥಾಂಚೋ' ಎಂದು ಹೆಸರು. ಅಲ್ಲಿಯೇ ನಮ್ಮಿಬ್ಬರ ಗುಂಪಿಗೆ ಮೂರನೆಯವನಾಗಿ ಒಬ್ಬ ರಕ್ಷಕ ಸೇರಿಕೊಂಡ. ಹಿಮದ ಮೇಲೆ ನಡೆಯುವಾಗ ಕಾಲಿಡಲು ಅನುಕೂಲವಾಗುವಂತೆ ಮುಂದೆ ಕೊಡಲಿಯಿಂದ ಕೆತ್ತಿಕೊಂಡು ಹೋಗುವ ಕೆಲಸ ಅವನದ್ದು. ಹೆಸರು ಕೇಳಿದಾಗ 'ಲಕ್ಕಿ' ಎಂದ. ಮಾರನೇ ದಿನ ಆಕಾಶ ಸ್ವಚ್ಛವಾಗಿದ್ದರೆ, ಬೆಳಗ್ಗೆ ಐದು ಗಂಟೆಗೇ ಹೊರಡೋಣವೆಂದು ಯೋಜಿಸಿಕೊಂಡು ಮಲಗಿಕೊಂಡೆವು. ಅದೇ ದಿವಸ ಸುಮಾರು ಹತ್ತು ಜನರ ಇನ್ನೊಂದು ಗುಂಪೂ ನಾವು ಉಳಿದಿದ್ದ ಬಂಕರ್‌ಗೇ ಬಂದು ವಿಶ್ರಾಂತಿ ತೆಗೆದುಕೊಂಡಿತು.

ಬೆಳಗ್ಗೆ ಶಿವನ ಪರೀಕ್ಷೆ ಕಾದಿತ್ತು! ಹಿಂದಿನ ದಿನ ಸುಂದರ ವಾಗಿದ್ದ ಆಕಾಶ, ಮಾರನೇ ದಿನ ಕರಾಳವಾಯಿತು. ಚಿಟಿಪಿಟಿ ಮಳೆ. ಈಗ ಬಿಟ್ಟೀತು, ಇನ್ನೊಂದು ಗಂಟೆ ಆದ ಮೇಲೆ ಬಿಟ್ಟೀತು ಎಂದು ಕಾಯುತ್ತಿದ್ದೆವು. ಬೆಳಗ್ಗೆ ೧೧.೦೦ ಗಂಟೆಗೆ ಮೋಡಗಳು ಚದುರಿಹೋಗಿ ಸ್ವಲ್ಪ ಅವಕಾಶ ಮಾಡಿಕೊಟ್ಟಿತು. ಸುಮಾರು ಮುಕ್ಕಾಲು ಗಂಟೆಯಲ್ಲಿ ಬಾಂದರ್ ಘಾಟಿಯನ್ನು ದಾಟಿ 'ಕಾಲಿ ಫ್ಲಾಟ್' ಎನ್ನುವ ಜಾಗಕ್ಕೆ ಹೋದೆವು. ಪುನಃ ಮೋಡಗಳು ಕೆಳಗಿನಿಂದ ಮೇಲ್ಮುಖವಾಗಿ ಬರತೊಡಗಿದವು. ಧಾರಾಕಾರವಾಗಿ ಮಳೆ ಶುರುವಾಯಿತು. "ಭಗವಂತನದು ಇದೆಂತಹ ಪರೀಕ್ಷೆಯಪ್ಪ!" ಎಂದುಕೊಂಡೆ. ಏಕೆಂದರೆ ನಮ್ಮ ಮಾರ್ಗದರ್ಶಿಯ ಪ್ರಕಾರ, ಮೇಲೆ ಬಹಳ ಮಳೆ ಯಾದರೆ ಹಿಮಪಾತ ಜೋರಾಗಿ ಆಗುತ್ತದೆ. ಹಾಗೆಯೇ, ಬೆಟ್ಟಕುಸಿತವೂ ಆಗುವುದು. ಇದರಿಂದ ನಮ್ಮ ರಸ್ತೆಯೇ ಮುಚ್ಚಿಹೋಗುವ ಸಂಭವವಿತ್ತು! ಹಿಮಾಲಯದ ಇಂತಹ ಪರ್ವತಪ್ರದೇಶಗಳನ್ನು ಏರುವಾಗ ಮಳೆಯನ್ನು ನಿರೀಕ್ಷಿಸಿ ರೈನ್‌ಕೋಟನ್ನು ತೆಗೆದುಕೊಂಡು ಹೋಗಲೇಬೇಕು. ನಾನು ಹಾಕಿಕೊಂಡಿದ್ದ ವಿಂಡ್‌ಚೀಟರ್ ನನಗೆ ಮಳೆಯಿಂದ ರಕ್ಷಣೆ ನೀಡಿತು.

ಅಲ್ಲೇ ಪಕ್ಕದಲ್ಲಿ ಇಬ್ಬರು ಸಾಧುಗಳು ಟೆಂಟೊಂದರಲ್ಲಿ ಕುಳಿತಿದ್ದರು. ನಾವು ಅವರ ಟೆಂಟ್ ಒಳಗೆ ಹೋದೆವು. ಮಳೆಯಿಂದ ರಕ್ಷಣೆ ಪಡೆಯಲು ನಮ್ಮ ಮಂಡಿಗಳನ್ನು ನಮ್ಮ ಗಲ್ಲಕ್ಕೆ ಒತ್ತುತ್ತ ಕುಳಿತೆವು. "ಚಹಾ ಪೀಯೇಂಗೆ?" (ಚಹಾ ಸೇವಿಸುವಿರೇನು?) ಎಂದು ಅವರಲ್ಲೊಬ್ಬ ಸಾಧು ಕೇಳಿದರು. "ಹಾ, ಜರೂರ್" ಎಂದೆ. "ದೂಧ್ವಾಲಿ, ನಾ ಲಿಂಬೂ ಚಾ?" ಎಂದು ಪ್ರಶ್ನಿಸಿದರು. "ಲಿಂಬೂವಾಲಿ" ಎಂದೆವು. ಅವರು ತಯಾರಿಸಿಕೊಟ್ಟ ನಿಂಬೆರಸದ ಚಹಾ ಸೇವಿಸುತ್ತ ಆ ಜಾಗದ ಮಹಿಮೆಯನ್ನು ಕೇಳತೊಡಗಿದೆವು. "ಇಲ್ಲಿ ಬೆಟ್ಟಕ್ಕೆ ನಮ್ಮ

ಕಿವಿಯನ್ನು ಕೊಟ್ಟು ಆಲಿಸಿದರೆ ಹಿಟ್ಟುಬೀಸುವ ಕಲ್ಲಿನ ಶಬ್ದವು ಕೇಳಿಬರುತ್ತದೆ. ತಾಯಿಯು ಶಿವನಿಗೆ ಇಲ್ಲೇ ಹಿಟ್ಟು ಬೀಸಿ ಕಳಿಸಿ ಕೊಡುತ್ತಾಳೆ" ಎಂದರು ಒಬ್ಬ ಸಾಧು. ನಮ್ಮ ಮಾರ್ಗದರ್ಶಿ ಕಿವಿಗೊಟ್ಟು ಆಲಿಸಿ "ಅದು ಕೆಳಗೆ ಹರಿಯುವ ನದಿಯ ಶಬ್ದದ ಪ್ರತಿಧ್ವನಿ ಇರಬಹುದು" ಎಂದನು. ಆದರೆ, ನನಗಂತೂ ಯಾವ ಶಬ್ದವೂ ಕೇಳಿಬರಲಿಲ್ಲ! ಹಿಮಾಚಲ ಭಾಷೆಯಲ್ಲಿ 'ಘ್ರಾಟ್' ಎಂದರೆ ಬೀಸುವ ಕಲ್ಲು. ಸುಮಾರು ಅರ್ಧ ಗಂಟೆ ಅಲ್ಲಿ ಕಳೆದ ನಂತರ, ಇದ್ದಕ್ಕಿದ್ದಂತೆ ಮೋಡಗಳು ಚದುರಿ ಸೂರ್ಯನು ಪ್ರಸನ್ನನಾಗಿ ತನ್ನ ಕೈಚಾಚಿದ ಕರಗಳಿಂದ ಮುಂದಿನ ಪ್ರಯಾಣಕ್ಕೆ ಆಹ್ವಾನ ನೀಡಿದ. ಆ ಸಾಧುಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತ ಮರು ಉತ್ಸಾಹದಿಂದ ಏರುತ್ತ ಹೋದೆವು. ವ್ಹಾ! ಅದೆಂತಹ ಪ್ರಕೃತಿ! ಅದ್ಭುತ! ಇಲ್ಲಿಂದ ದೇವದಾರುವಿನ ಸಾಲುಗಳು ಮುಗಿದು, ಭೂರ್ಜಮರದ ತೆಳುವಾದ ಸಾಲುಗಳು ಕಂಡವು. ಅಲ್ಲಲ್ಲಿ ಎರಡೂ ಪಕ್ಕ ಕುರುಚಲು ಗಿಡಗಳು ಕಾಣಿಸಿಕೊಂಡವು. ಇನ್ನೂ ಎತ್ತರ ಹೋಗುತ್ತಿದ್ದಂತೆ ಎತ್ತೆತ್ತಲೂ ಹಿಮವೇ ಕಾಣಲು ಶುರುವಾಯಿತು. ಶ್ವಾಸಕೋಶಗಳಿಗೆ ಆಮ್ಲಜನಕ ಕಡಿಮೆ ಯಾಗುತ್ತಿದ್ದುದು ಅರಿವಿಗೆ ಬಂತು. ಅಲ್ಲೊಂದು ಕಡೆ ಕಪ್ಪು ಬೆಟ್ಟದ ಕುತ್ತಿಗೆಯಷ್ಟನ್ನು ಮಾತ್ರ ಬುಡದಿಂದ ಅಪ್ಪಿಕೊಂಡಿದ್ದ ಹಿಮದ ರಾಶಿಯನ್ನು ಕಂಡೆ. ಅದರ ಮೇಲೆ ಬಿಳಿಮೋಡಗಳು ತಮ್ಮ ಕರಿನೆರಳನ್ನು ಹರಡಿದ್ದವು. ಶಿವನ ಕಂಠವನ್ನು ಅಪ್ಪಿಕೊಂಡಿದ್ದ ಪಾರ್ವತಿಯನ್ನು ಕಂಡು, ಅಸೂಯೆಯಿಂದ ಮೋಡದ ರೂಪದಲ್ಲಿದ್ದ ಸವತಿಯಾದ ಬಿಳಿಗಂಗೆಯು ಅವಳನ್ನು ಕಪ್ಪಾಗಿಸಬೇಕೆಂಬ ಹಠದಿಂದ, ನೆರಳನ್ನು ಸೃಷ್ಟಿಸಿ ದ್ದಂತೆ ಕಾಣಿಸುತ್ತಿತ್ತು. ಸ್ವಲ್ಪ ಹೊತ್ತಿನಲ್ಲಿ, ತನ್ನ ಈ ಆಟಕ್ಕೆ ಪಾರ್ವತಿಯು ಬಗ್ಗುವುದಿಲ್ಲವೆಂದು, ಮಳೆ ಸುರಿಸಿ ಆಕೆಯ ಹಿಡಿತವನ್ನು ಬಿಡಿಸಬೇಕೆಂದು ಪ್ರಯತ್ನಿಸುತ್ತಿದ್ದ ಮೇಘ ರೂಪಿ ಗಂಗೆಯನ್ನು ಓಡಿಸಲು, ಗಿರಿಜೆಯು ಮರುತನ (ವಾಯು) ಸಹಾಯವನ್ನು ಪಡೆದುದನ್ನು ನನ್ನಲ್ಲಿದ್ದ ಮೂಕ ಕವಿ ಕಂಡಿದ್ದ!

ಬರಬರುತ್ತ ಯಾತ್ರೆ ತ್ರಾಸದಾಯಕವಾಯಿತು. ಸುಂದರಾಶಿ ಎಂಬ ಜಾಗಕ್ಕೆ ಮಧ್ಯಾಹ್ನ ೨.೦೦ ಗಂಟೆಗೆ ಬಂದು ತಲುಪಿದೆವು. "ಸ್ವಾಮೀಜಿ, ನಾವೀಗಲೇ ಬೆಳಗಿನ ಮಳೆಯ ದೆಸೆಯಿಂದ ಆರು ಗಂಟೆ ತಡವಾಗಿದ್ದೇವೆ. ಬೇಗ ಬೇಗ ಹೆಜ್ಜೆ ಹಾಕದೆ ಹೋದರೆ, ಮೇಲೆ ಸಿಕ್ಕಿಹಾಕಿಕೊಳ್ಳಬೇಕಾಗುತ್ತದೆ. ಬೇಗ ಈ ಪರೋಟಾಗಳನ್ನು ತಿನ್ನಿರಿ. ಹೊರಡೋಣ" ಎಂದನು ನಮ್ಮ ಮಾರ್ಗದರ್ಶಿ. ಇದಾದ ಮೇಲೆ ಮುಂದೆ ನೋಡಿದರೆ, ನಡುಕ ಶುರುವಾಯಿತು! ಇನ್ನು ಹೆಚ್ಚಿನ ದಾರಿ ಹಿಮಗಲ್ಲುಗಳ ಮೇಲೆ ನಡೆಯುವುದಾಗಿತ್ತು! ನಮ್ಮ ಮುಂದೆ 'ಲಕ್ಕಿ' ತನ್ನ ಹಿಮಗತ್ತಿಯಿಂದ ಹಿಮವನ್ನು ಕೆತ್ತುತ್ತಾ ಕಾಲಿಡಲು ಜಾಗ ಮಾಡುತ್ತಿದ್ದನು. ಭಗವಂತ ನೆನಪಾದ! "ಇದರ ಮೇಲೆ ಈಗ ನಡೆಯಬೇಕೇನು?" ಎಂದು ನಾನು ಕೇಳಿದೆ. "ಹೌದು" ಎಂದ ನನ್ನ ಮಾರ್ಗದರ್ಶಿ. ಸರಿ. ನನ್ನ ಪಕ್ಕದಲ್ಲಿ ಅವನು ನನ್ನ ಕೈಯನ್ನು ಹಿಡಿದುಕೊಂಡಿದ್ದ. ನಾನು ಹಿಮದ ಮೇಲೆ ಕಾಲಿಟ್ಟೆ. ನನಗೆ ಹಿಡಿತವೇ ಸಿಗುತ್ತಿಲ್ಲ! ಕೆಳಕೆಳಗೆ ಜಾರುತ್ತಿದೆ. ಇಲ್ಲಿಂದ ಬಿದ್ದರೆ, ಕೆಳಗೆ ಹರಿಯುತ್ತಿರುವ ನದಿಗೆ ಜಾರಿ ಬಿದ್ದುಬಿಡಬೇಕಾಗುತ್ತದೆ. ಅವನು ನನ್ನ ಕೈ ಬಿಟ್ಟುಬಿಟ್ಟರೆ ಏನಾಗಬಹುದೆಂದು ನನಗೆ ಅಂದಾಜು ಸಿಕ್ಕಿತು! ಹೀಗಾಗಿ ನಾನೇ ನನ್ನ ಮಾರ್ಗದರ್ಶಿಯ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡೆ! ಆದರೆ, ಬೆವರು ಕಿತ್ತು ಹರಿಯುತ್ತಿದ್ದ ನನ್ನ ಕೈ ಜಾರುತ್ತಿತ್ತು! "ಹಾಗೆ ಹಿಡಿಯಬೇಡಿ. ನನ್ನ ಕೈ ನೋಯುತ್ತದೆ. ಹಿಮದ ಮೇಲೆ ಹೀಗೆ ಕಾಲಿಡಬೇಕು" ಎಂದು ತೋರಿಸಿದ ನನ್ನ ಮಾರ್ಗದರ್ಶಿ. ಎಲ್ಲಿ ಹಿಮವನ್ನು ಕೊಚ್ಚಿ ಜಾಗ ಮಾಡಲಾಗಿತ್ತೋ, ಅಲ್ಲಿ ಮೊದಲು ಹಿಮ್ಮಡಿಯನ್ನು ಇಟ್ಟು, ನಂತರ ಉಳಿದ ಪಾದವನ್ನು ಇಡಬೇಕೆಂದು ತೋರಿಸಿಕೊಟ್ಟ. ಸಾಮಾನ್ಯ ನೆಲದ ಮೇಲೆ ನಡೆದಂತೆ ವಿಶ್ವಾಸದಿಂದ ಹೆಜ್ಜೆ ಇಡುವಂತೆ ಹೇಳಿದ. ಆದರೂ, ಈ ಉಪಾಯವನ್ನು ಕಲಿಯಬೇಕಾದರೆ ಮೊದಲು ನನ್ನ 'ಹಿಮದ ಮೇಲೆ ನಡೆಯುವ ಹೆದರಿಕೆ'ಯನ್ನು ಹೇಗಾದರೂ ಮಾಡಿ ತ್ಯಜಿಸಬೇಕಾಗಿತ್ತು! ಆದರೆ, ನಾನು ಹೆದರಿಕೆಯನ್ನು ಬಿಟ್ಟರೂ ಅದು ನನ್ನನ್ನು ಬಿಟ್ಟಂತೆ ಕಾಣಲಿಲ್ಲ! ಭೈರೋ ಘಾಟಿ ಎಂಬಲ್ಲಿ, ಇದೇ ರೀತಿಯ ಇನ್ನೊಂದು ಸಾಹಸ ಮಾಡಬೇಕಾಯಿತು. ಅಲ್ಲಂತೂ ೮೦ ಡಿಗ್ರಿ ಕೋನದಲ್ಲಿ ಏರುತ್ತಿದ್ದ ಹಿಮಗಲ್ಲಿನ ಮೇಲೆ



ಇಳಿಜಾರಿನಲ್ಲಿ ಪ್ರಯಾಸದ ನಡಿಗೆ

ನಡೆತ! ಆಗ ಶುರುವಾಯಿತು ನನ್ನ ಹೃದಯದ ಮಹಾ ಬಡಿತ! ಕೈಗಳಲ್ಲಿ ಬೆವರಿನ ಸುರಿತ! ನಾನು ನನ್ನನ್ನೇ ಮೊದಲು ಇಲ್ಲಿ ಗೆಲ್ಲಬೇಕಾಗಿತ್ತು, ಹಿಮದ ಮೇಲೆ ಕಾಲಿಡಲು! ಕೈಯಲ್ಲಿ ಚೂಪಾದ ಕೋಲು ಇದ್ದರೂ ನನಗೆ ನನ್ನಲ್ಲೇ ವಿಶ್ವಾಸ ಸಾಲದ್ದರಿಂದ ಇನ್ನು ಆ ಕೋಲಿನ ಮೇಲೆ ಹೇಗೆ ತಾನೇ ವಿಶ್ವಾಸ ಹುಟ್ಟೀತು?! ನಮ್ಮ ಮಾರ್ಗದರ್ಶಿ ಎಷ್ಟು ಧೈರ್ಯ ತುಂಬುತ್ತಿದ್ದರೂ ಸಾಕಾಗಲಿಲ್ಲ! ಕೊನೆಗೂ ಹೇಗೋ ಮಾಡಿ ಹತ್ತಿದೆ! (ಈಗಲೂ ಅದನ್ನು ನೆನಸಿಕೊಂಡರೆ ಮೈ ಜುಂ ಎನಿಸುತ್ತದೆ!) ಅಲ್ಲಿಂದ ಇಡೀ ದೃಶ್ಯವೇ ಬದಲಾಗುತ್ತದೆ. ನಾವು ನಿಜವಾಗಿಯೂ ಬೇರೆಯದೇ ಲೋಕದಲ್ಲಿರುವಂತೆ ಕಾಣಿಸುತ್ತದೆ. ಎಲ್ಲಿ ನೋಡಿದರೂ ಹಿಮ. ಅಲ್ಲಲ್ಲಿ ಕಪ್ಪು ಬೆಟ್ಟಗಳ ಇಣುಕುವಿಕೆ. ಮೌನವೇ ಹೆಪ್ಪುಗಟ್ಟಿತ್ತು ಅಲ್ಲಿ! ಹಿಮದ ಮೇಲೆ ನಡೆದು ಮೊದಲು ಗೌರಿಕುಂಡವನ್ನು

ತಲುಪಿದೆವು. ವ್ಹಾ! ಇಲ್ಲಿಂದಲೇ ಮಣಿಮಹೇಶನ ಅದ್ಭುತ ದೃಶ್ಯ. ಅಪ್ರಯತ್ನವಾಗಿ ಕಣ್ಣಲ್ಲಿ ನೀರು ಬಂತು, ಅವನನ್ನು ಕಂಡಾಗ! ಗೌರಿಕುಂಡದಲ್ಲಿ ಸ್ನಾನ ಮಾಡಬಹುದೇ ಎಂದು ನೀರು ಮುಟ್ಟಿ ನೋಡಿದೆ. ನೀರು ಹೆಪ್ಪುಗಟ್ಟದೆ ಇದ್ದರೂ 'ತಣ್ಣಗಿನ ಶಾಕ್' ಪಡೆದ ಮೇಲೆ ಈ ಸಾಹಸ ಬೇಡವೆನಿಸಿತು. ಪ್ರೋಕ್ಷಣೆ ಮಾಡಿಕೊಂಡು ಬಾಟಲ್‌ನಲ್ಲಿ ತುಂಬಿಸಿಕೊಂಡೆ. ಇನ್ನೂ ಎರಡು ಫರ್ಲಾಂಗು ಹಿಮದ ಮೇಲೆ ನಡೆದು ಮಣಿಮಹೇಶ ಸರೋವರಕ್ಕೆ ಹೋಗಬೇಕಿತ್ತು; ಅದೂ ಕೂಡ ೬೦ ಡಿಗ್ರಿ ಕೋನದಲ್ಲಿ ಹಿಮದ ಮೇಲೆ ಏರುತ್ತಲೇ ಹೋಗಬೇಕು. ಅಲ್ಲೊಬ್ಬರು ನೇಪಾಳಿ ಸಾಧುಗಳು ಕಳೆದ ನಾಲ್ಕು ವರ್ಷಗಳಿಂದ ಒಂದು ಬಂಕರ್ ಮಾಡಿಕೊಂಡು ವಾಸಿಸುತ್ತಿದ್ದಾರೆ. ನಾವು ಹೋಗಿ ಅವರನ್ನು ಮಾತನಾಡಿಸಿ, ಪ್ರಸಾದ ಪಡೆದೆವು. ಅವರು ಕಾಫಿ ಮಾಡಿಕೊಟ್ಟರು. ಸ್ವಲ್ಪ ಹೊತ್ತು ಸುಧಾರಿಸಿಕೊಂಡು, "ಮಣಿಮಹೇಶ ಸರೋವರ ಎಲ್ಲಿದೆ ಇಲ್ಲಿ?" ಎಂದು ಮಾರ್ಗದರ್ಶಿಯನ್ನು ಪ್ರಶ್ನಿಸಿದೆ. "ನೀವು ನಿಂತಿರುವಲ್ಲಿಯೇ" ಎಂಬ

ಮಣಿಮಹೇಶದಿಂದ ಕಾಣಬರುವ ರೋಮಾಂಚಕ ದೃಶ್ಯ



ಉತ್ತರ ಬಂತು! ಮಧ್ಯೆ ತ್ರಿಶೂಲಗಳನ್ನು ಹುಗಿದಿದ್ದರು. ಅದು ತಳದಿಂದ ೨೫ ಅಡಿ ಎತ್ತರವಿತ್ತು. ಅಲ್ಲೇ ತೀರದಲ್ಲಿ ಅಮೃತ ಶಿಲೆಯ ಶಿವಮೂರ್ತಿ 'ಚೌಮುಖ'ವಿತ್ತು. ಅದಕ್ಕೆ ಪೂಜೆ ಸಲ್ಲಿಸಿ, ಅಲ್ಲಲ್ಲಿ ಕಣ್ಣಿಗೆ ಕಂಡ ಸರೋವರದ ನೀರನ್ನು ಬಾಟಲ್‌ಗೆ ಹಾಕಿಕೊಂಡು ಕೆಳಗೆ ಇಳಿಯಲು ಶುರು ಮಾಡಿದೆವು. ಇನ್ನೇನು ಮಣಿಮಹೇಶನ ಸನ್ನಿಧಿಯಿಂದ ಕೆಳಗಿಳಿಯುವಾಗ, ಮೇಲಿನಿಂದ ನಮ್ಮ ಮೈಮೇಲೆ ಹತ್ತಿಯಂತೆ ಹಿಮದ ವೃಷ್ಟಿ ಬಿತ್ತು, ಆಶೀರ್ವಾದದಂತೆ. ಆ ಹಿಮದ ಹನಿಗಳು ನಮ್ಮ ಮೈಮೇಲೆ ಬಿದ್ದಂತೆ ಕರಗಿ ಹೋಗುತ್ತಿದ್ದವು. ಕೆಳಗೆ ಭೈರೋ ಘಾಟಿಯಲ್ಲಿ ಇಳಿಯುವಾಗ ನನ್ನ ಕಾಲು ಇದ್ದಕ್ಕಿದ್ದಂತೆ ಸರ್ರನೆ ಜಾರತೊಡಗಿತು. ಮೂರು ಅಡಿ ಕೆಳಗೆ ಜಾರಿದೆ. ತಕ್ಷಣ ನನ್ನ ಕೈಯಲ್ಲಿದ್ದ ಕೋಲನ್ನು ಆಸರೆಯಾಗಿ ಚುಚ್ಚಿದೆ. ಇನ್ನೊಂದು ಕಾಲು ಮಂಜಿನಲ್ಲಿ ಎರಡಡಿ ಹೂತುಕೊಂಡಿತು. ತಕ್ಷಣ ನಮ್ಮ ರಕ್ಷಕ ನನ್ನನ್ನು ಹಿಡಿದುಕೊಂಡು ಸ್ವಲ್ಪ ಹತ್ತಿರದಲ್ಲಿದ್ದ ಬಂಡೆಗೆ ಒರಗಿಸಿ, ನನ್ನ ಕಾಲುಗಳನ್ನು ಹಿಮದಿಂದ ಬಿಡಿಸಿ, ಕಲ್ಲಿನ ಮೇಲೆ ಕೂಡಿಸಿದ. ಮುಂದೆ ನೋಡಿದರೆ, ನಾವು ಹಿಂದೆ ಬಂದಿದ್ದ ಹಿಮದ ದಾರಿಯ ಮೇಲೆ ಮೇಲಿನಿಂದ ದೊಡ್ಡ-ಸಣ್ಣ ಕಲ್ಲುಗಳು ಉರುಳಿಕೊಂಡು ಬರುತ್ತಿದ್ದವು. ಸ್ವಲ್ಪ ಹೊತ್ತು ನಾವು ಇರುವಲ್ಲೇ ಇದ್ದು, ಕಲ್ಲುಗಳು ಬೀಳುವುದು ನಿಂತಮೇಲೆ ಹಿಮದ ಮೇಲೆ ನಡೆಯುತ್ತ ಸಾಯಂಕಾಲ ೬.೩೦ ಕ್ಕೆ ಧಾಂಚೋಗೆ ವಾಪಾಸು ಬಂದೆವು. ಹಿಂದಿನ ದಿನ ಬಂದಿದ್ದ ಹತ್ತು ಜನ ಇನ್ನೂ ಹೋಗುವುದೋ, ಬೇಡವೋ ಎಂದು ಯೋಚಿಸುತ್ತಿದ್ದರು. ನಾವು ಅಲ್ಲಿಗೆ ಹಿಂತಿರುಗಿದ ನಂತರ ಎಲ್ಲರೂ ಚಪ್ಪಾಳೆ ತಟ್ಟಿ ಸ್ವಾಗತಿಸಿದರು. ಕೊನೆಗೂ ಅವರು ಮಣಿಮಹೇಶಕ್ಕೆ ಹೋಗುವ ಸಾಹಸ ಮಾಡಲೇ ಇಲ್ಲ. ನಾವು ಆ ದಿನ ಧಾಂಚೋವಿನಲ್ಲೇ ಉಳಿದು ಮಾರನೇ ದಿನ ಅಲ್ಲಿಂದ ಇಳಿದುಬಂದೆವು. ಮಾರನೇ ದಿನದಿಂದ ಪುನಃ ಧಾರಾಕಾರವಾಗಿ ಮಳೆ ಶುರುವಾಯಿತು. ಬಹುಶಃ ನಮಗೆ ಆ ದಿವಸ ದರ್ಶನ ಮಾಡಲೆಂದೇ ಪ್ರಕೃತಿ ಬಿಟ್ಟುಕೊಟ್ಟಿತ್ತೋ ಎಂದುಕೊಂಡೆ. ಮೇ ೨೭ ಸೋಮವಾರ ಮಣಿಮಹೇಶದ ದರ್ಶನ ಮಾಡಿ ಕೊನೆಗೆ ೨೮ರ ಬೆಳಿಗ್ಗೆ ಭರ್‌ಮೌರ್‌ಗೆ ಬಂದೆವು. ೨೯ರ ಬೆಳಿಗ್ಗೆ ಚಂಬಾಗೆ ಬಂದು ಅಲ್ಲಿಂದ ೩೦ಕ್ಕೆ ದೆಹಲಿಗೆ ಬಂದೆನು.

**ಯಾತ್ರೆಯಿಂದ ಕಲಿತ ಆಧ್ಯಾತ್ಮಿಕ ಪಾಠ:** ಪರ್ವತಗಳನ್ನು ರಸ್ತೆಯ ಮೂಲಕ ದಾಟುವಾಗ ಏರುವುದೂ ಇಳಿಯುವುದೂ ಇದ್ದೇ ಇರುತ್ತವೆ. ಹಾಗೆಯೇ ಆಧ್ಯಾತ್ಮಿಕ ಜೀವನದ ಪ್ರತಿಯೊಂದು ಏರುವಿಕೆ, ಇಳಿಯುವಿಕೆ – ಈ ಎರಡೂ ಮುಂದಿನ ಹಂತಕ್ಕೆ ನಾವು ಹೋಗುವ ದಾರಿಯಾಗಿ ಪರಿಣಮಿಸುತ್ತದೆ. ಹಿಮದ ಮೇಲೆ ಕಾಲಿಡುವಾಗ ಕೆಳಗೆ ಪ್ರಪಾತವಿದೆಯೋ, ನೆಲವಿದೆಯೊ ಎಂಬುದರ ಜ್ಞಾನ ಇಲ್ಲದ್ದರಿಂದ ಭಯವಾಗುತ್ತಿತ್ತು; ಮಾರ್ಗದರ್ಶಿಯ ಸಹಾಯ ಅತ್ಯಗತ್ಯವೆನಿಸಿತು. ಹಾಗೆಯೇ ನಿಗೂಢವಾದ ಆಧ್ಯಾತ್ಮಿಕ ಜೀವನ ಮಾರ್ಗದಲ್ಲಿಯೂ ಒಬ್ಬ ಮಾರ್ಗದರ್ಶಿಯ ಅಗತ್ಯವಿದೆ. ಆತನನ್ನೇ 'ಗುರು' ಎನ್ನುವುದು. **'ದೂರತಃ ಪರ್ವತೋ ರಮ್ಯಃ'** ಎಂಬ ಸುಭಾಷಿತ ಸರಿಯೆ. ದೂರದಿಂದ ಬೆಟ್ಟಗಳು ಸುಂದರವಾಗಿ ಕಾಣುತ್ತವೆ. ಆದರೆ, ಹತ್ತಿರ ಹೋಗಿ ಪ್ರಯತ್ನಿಸಿದರೆ ಅವು ಭಯಂಕರ ಹಾಗೂ ತ್ರಾಸದಾಯಕ ಎನ್ನುವುದು ಅನುಭವಕ್ಕೆ ಬರುತ್ತವೆ. ಹಾಗೆಯೇ ಆಧ್ಯಾತ್ಮಿಕ ಜೀವನ ಕೂಡ. ಪರ್ವತಾರೋಹಿಗಳಲ್ಲಿ **'ಪರ್ವತಗಳು ನಮ್ಮನ್ನು ಹತ್ತಿಸಿಕೊಂಡರೆ ಮಾತ್ರವೇ ಹತ್ತೇವು'** ಎಂಬ ನಂಬಿಕೆಯಿದೆ. ಹಾಗೆಯೇ ಆಧ್ಯಾತ್ಮಿಕ ಶಿಖರಸ್ಥನಾದ ಭಗವಂತನು ತನ್ನ ಅನುಗ್ರಹದಿಂದ ನಮ್ಮನ್ನು ಹತ್ತಿಸಿಕೊಂಡರೆ ಮಾತ್ರವೇ ಆಧ್ಯಾತ್ಮಿಕ ಸಿದ್ಧಿ ಸಾಧ್ಯ. ಎಷ್ಟೆಷ್ಟು ನಮ್ಮ ಹತ್ತುವಿಕೆ ಕಷ್ಟಕರವಾಗಿರುವುದೋ, ಅಷ್ಟಷ್ಟೂ ಸೌಂದರ್ಯವನ್ನೂ, ಆನಂದವನ್ನೂ ಪರ್ವತಗಳು ನಮ್ಮೆದುರಿಗೆ ಬಿಚ್ಚಿಡುತ್ತವೆ. ಹಾಗೆಯೇ ಆಧ್ಯಾತ್ಮಿಕ ಜೀವನಯಾತ್ರೆಯೂ ತ್ರಾಸದಾಯಕ ಮತ್ತು ಕಷ್ಟಕರ. ಆದರೆ, ಅದರ ಸೌಂದರ್ಯ-ಆನಂದಗಳೂ ಅಷ್ಟೇ ಉನ್ನತ ಮಟ್ಟದ್ದಾಗಿವೆ.